ತಾಂತ್ರಿಕ ಶಿಕ್ಷಣ ನಿರ್ದೇಶಕರು, ಕರ್ನಾಟಕ, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಈ ಕೆಳಕಂಡ ಖಾಸಗಿ ಅನುದಾನಿತ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ' ಮೂಲಕ ನೇರವಾಗಿ ಸೆಪ್ಟೆಂಬರ್ 2018 ರ ಮಾಹೆಯ ಸರ್ಕಾರದ ಪಾಲಿನ ಸಹಾಯನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ/184/ಟಿಪಿಇ 2009, ದಿ: 27.07.2009
2) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 02.03.2010
3) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 14-05-2010
4) ಪ್ರಿನ್ಸಿಪಾಲರು,ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು ಇವರ ಪತ್ರ ಜೆಸಿಇ/ಎಸಿಎಸ್/2018-19 ದಿ:18-9-18

ಪ್ರಸ್ತಾವನೆ:-

ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಸಿಬ್ಬಂದಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುವ ಶೇ.85 ರಷ್ಟು ಸಹಾಯನುದಾನವನ್ನು ಪ್ರತೀ ತಿಂಗಳು ರಾಷ್ಟ್ರೀಕೃತ ಬ್ಯಾಂಕ್‌ಗೆ ಜಮೆ ಮಾಡುವ ಮೂಲಕ ಸಿಬ್ಬಂದಿ ವರ್ಗದವರುಗಳಿಗೆ (ಬೋಧಕ ಮತ್ತು ಬೋಧಕೇತರ) ವಿತರಿಸಲು ಸರ್ಕಾರವು ಅನುಮತಿಸಿರುತ್ತದೆ. ಹಾಗೂ ಈ ಸಂಬಂಧ ಮುಂದಿನ ಅಗತ್ಯ ಕ್ರಮವನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೈಗೊಳ್ಳಲು ಆದೇಶಿಸಿರುತ್ತದೆ.

ಉಲ್ಲೇಖ (2) ಮತ್ತು (3) ರ ಆದೇಶಗಳನ್ವಯ, ಇಲಾಖೆಯು ತನ್ನ ಅಧೀನಕ್ಕೆ ಒಳಪಟ್ಟಿರುವ ಎಲ್ಲಾ ಅನುದಾನಿತ ಸಂಸ್ಥೆಗಳಿಗೆ, 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಶಾಖೆಗಳಲ್ಲಿ ಸಿಬ್ಬಂದಿ ವರ್ಗದವರ ಹಾಗೂ ಪ್ರಾಂಶುಪಾಲರ ಹೆಸರಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆಗಳನ್ನು ತೆರೆಯುವಂತೆ ಸೂಚನೆಯನ್ನು ನೀಡಿದ್ದು, ಅದರಂತೆ, ಈ ಕೆಳಕಂಡ ಅನುದಾನಿತ ಸಂಸ್ಥೆಗಳು ಸಿಬ್ಬಂದಿ ವರ್ಗದವರ ಹಾಗೂ ಪ್ರಾಂಶುಪಾಲರ ಹೆಸರಿನಲ್ಲಿ ಪ್ರತ್ಯೇಕ ಖಾತೆಗಳನ್ನು ತೆರೆದಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತವೆ ಹಾಗೂ ಸೆಪ್ಟೆಂಬರ್ 2018 ರ ಮಾಹೆಯ ಸಹಾಯನುದಾನ ಬಿಲ್ಲುಗಳನ್ನು ಪಾವತಿಗಾಗಿ ಈ ಕಚೇರಿಗೆ ಸಲ್ಲಿಸಿರುತ್ತವೆ.

ಪ್ರಿನ್ಸಿಪಾಲರು,ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು ಇವರು ಉಲ್ಲೇಖ(4) ರ ಪತ್ರದಲ್ಲಿ ಎಸ್.ಬಿ.ಐ ಬ್ಯಾಂಕ್‌ನಲ್ಲಿ ಸಿಬ್ಬಂದಿಗಳ ಖಾತೆ ತೆರೆದು ಸೆಪ್ಟೆಂಬರ್'18 ರಿಂದ ಇಸಿಎಸ್ ಪದ್ಧತಿ ಅಳವಡಿಸಿಲಾಗಿದೆಯೆಂದು ತಿಳಿಸುತ್ತಾ ಜುಲೈ'18 ಮತ್ತು ಆಗಸ್ಟ್'18 ರ ವೇತನವನ್ನು ಆಡಳಿತ ಮಂಡಳಿ ವತಿಯಿಂದ ಸಿಬ್ಬಂದಿಗಳಿಗೆ ಪಾವತಿ ಮಾಡಿರುವುದರಿಂದ, ಸೆಪ್ಟೆಂಬರ್'18 ರ ವೇತನದೊಂದಿಗೆ ಜುಲೈ'18 ಮತ್ತು ಆಗಸ್ಟ್'18 ವೇತನವನ್ನು ಪ್ರಿನ್ಸಿಪಾಲರ ಖಾತೆಗೆ ಜಮ ಮಾಡಬೇಕೆಂದು ಕೋರಿರುತ್ತಾರೆ.

ಸಂಸ್ಥೆಗಳು ಸಲ್ಲಿಸಿರುವ ಸೆಪ್ಟೆಂಬರ್ 2018 ರ ಸಹಾಯನುದಾನ ಬಿಲ್ಲುಗಳನ್ನು ಪರಿಶೀಲಿಸಲಾಗಿದೆ. ಕೆಳಕಂಡ ಎಲ್ಲಾ ಸಂಸ್ಥೆಯ ಕ್ಲೈಮ್‌ಗಳನ್ನು ಇಲಾಖೆಯ ಪೂರ್ಣ ಲೆಕ್ಕ ತಪಾಸಣೆಯ ನಿಬಂಧನೆಗೊಳಪಡಿಸಿ, ಈ ಕೆಳಕಂಡ ಪಟ್ಟಿಯ ಕಾಲಂ(6) ರಲ್ಲಿ ಕಾಣಿಸಿರುವ ಮೊತ್ತ ರೂ.**36581412/-(ರುಪಾಯಿ ಮೂರು ಕೋಟಿ ಅರವತ್ತೈದು ಲಕ್ಷದ ಎಂಬತ್ತೊಂದು ಸಾವಿರದ ನಾಲ್ಕು ನೂರಾ ಹನ್ನೆರಡು ಮಾತ್ರ)** ಗಳನ್ನು ನೇರವಾಗಿ ಸಿಬ್ಬಂದಿವರ್ಗದವರಿಗೆ ವಿತರಿಸುವ ಸಲುವಾಗಿ; ಕಾಲಂ(5) ರಲ್ಲಿ ಕಾಣಿಸಿರುವ ಮೊತ್ತ ರೂ.**46822172/-(ರುಪಾಯಿ ನಾಲ್ಕು ಕೋಟಿ ಅರವತ್ತೆಂಟು ಲಕ್ಷದ ಇಪ್ಪತ್ತೆರಡು ಸಾವಿರದ ನೂರಾ ಎಪ್ಪತ್ತೆರಡು ಮಾತ್ರ)**ಗಳನ್ನು ಬಿಲ್ಲಿನಲ್ಲಿ ಕಡಿತಗೊಳಿಸಿರುವ ಮೊತ್ತವನ್ನು ಸಂಬಂಧಪಟ್ಟ ಖಾತೆಗಳಿಗೆ ವಿತರಿಸಲು ಅನುಕೂಲವಾಗುವಂತೆ ಪ್ರಿನ್ಸಿಪಾಲರ ಖಾತೆಗೆ ಜಮೆ ಮಾಡುವುದಕ್ಕಾಗಿ; ಒಟ್ಟಾರೆ ಕಾಲಂ(4) ರಲ್ಲಿ ಕಾಣಿಸಿರುವ ಒಟ್ಟು ಮೊತ್ತ ರೂ.**83403584/-(ರುಪಾಯಿ ಎಂಟು ಕೋಟಿ ಮುವತ್ತನಾಲ್ಕು ಲಕ್ಷದ ಮೂರು ಸಾವಿರದ ಎಂಬತ್ತನಾಲ್ಕು ಮಾತ್ರ)**ಗಳನ್ನು ಸೆಪ್ಟೆಂಬರ್ 2018 ರ ಮಾಹೆಯ ಸಹಾಯನುದಾನವನ್ನು ವಿತರಿಸುವ ಸಲುವಾಗಿ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ ಆದುದರಿಂದ,ಈ ಕೆಳಕಂಡ ಆದೇಶ.

## ಆದೇಶ

**ಸಂಖ್ಯೆ: ಡಿಟಿಇ 32 ಜಿಆರ್‌ಟಿ(2) 2018 ಬೆಂಗಳೂರು, ದಿ:1-10-18**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸೆಪ್ಟೆಂಬರ್ 2018 ರ ಮಾಹೆಯ ವೇತನ ಕಾಲಂ(6) ರಲ್ಲಿ ಕಾಣಿಸಿರುವ ಮೊತ್ತ ರೂ.**36581412/-(ರುಪಾಯಿ ಮೂರು ಕೋಟಿ ಅರವತ್ತೈದು ಲಕ್ಷದ ಎಂಬತ್ತೊಂದು ಸಾವಿರದ ನಾಲ್ಕು ನೂರಾ ಹನ್ನೆರಡು ಮಾತ್ರ)** ಗಳನ್ನು ಈ ಕೆಳಕಂಡ ಖಾಸಗಿ ಅನುದಾನಿತ ಸಂಸ್ಥೆಗಳ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರುಗಳ ಉಳಿತಾಯಖಾತೆಗಳಿಗೆ ನೇರವಾಗಿ ಜಮೆ ಮಾಡುವ ಸಂಬಂಧವಾಗಿ; ಕಡಿತಗಳನ್ನು ಸಂಬಂಧಿಸಿದ ಕಡಿತಗಳ ಖಾತೆಗಳಿಗೆ ವಿತರಿಸುವುದಕ್ಕಾಗಿ, ಸಂಬಂಧಪಟ್ಟ ಪ್ರಿನ್ಸಿಪಾಲರ ಖಾತೆಗೆ ಜಮೆ ಮಾಡಲು ಹಾಗೂ ಕಾಲಂ(5)ರಲ್ಲಿ ಕಾಣಿಸಿರುವ ಮೊತ್ತ ರೂ.**46822172/-(ರುಪಾಯಿ ನಾಲ್ಕು ಕೋಟಿ ಅರವತ್ತೆಂಟು ಲಕ್ಷದ ಇಪ್ಪತ್ತೆರಡು ಸಾವಿರದ ನೂರಾ ಎಪ್ಪತ್ತೆರಡು ಮಾತ್ರ)**ಗಳು ಸೇರಿ ಒಟ್ಟಾರೆ ಕಾಲಂ (4) ರಲ್ಲಿ ಕಾಣಿಸಿರುವ ವಾಸ್ತವಿಕ ಸಹಾಯನುದಾನದ ಸರ್ಕಾರದ ಪಾಲಿನ ಮೊತ್ತ ರೂ.**83403584/-(ರುಪಾಯಿ ಎಂಟು ಕೋಟಿ ಮುವತ್ತನಾಲ್ಕು ಲಕ್ಷದ ಮೂರು ಸಾವಿರದ ಎಂಬತ್ತನಾಲ್ಕು ಮಾತ್ರ)**ಗಳನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8 ರಲ್ಲಿ 'ಡ್ರಾ' ಮಾಡಿ ವಿತರಿಸಲು ಆದೇಶಿಸಲಾಗಿದೆ.

### ಅನುಬಂಧ

| ಕ್ರ.ಸಂ | ಸಂಸ್ಥೆ ಸಂಕೇತ ಸಂಖ್ಯೆ | ಸಂಸ್ಥೆಯ ಹೆಸರು | ಸೆಪ್ಟೆಂಬರ್ 2018 ಮಾಹೆಯ ಸರ್ಕಾರದ ಪಾಲಿನ 85% ಮೊತ್ತ (ರೂ.) | ಪ್ರಿನ್ಸಿಪಾಲರ ಖಾತೆಗೆ ಜಮೆಯಾಗ ಬೇಕಾದ ಮೊತ್ತ (ರೂ.) | ನೌಕರರ ಖಾತೆಗೆ ಜಮೆಯಾಗ ಬೇಕಾದ ಒಟ್ಟು ಮೊತ್ತ (ರೂ.) |
|---|---|---|---|---|---|
| 1 | 2 | 3 | 4 | 5 | 6 |
| 1 | ಇ202 | ಬಿವಿಬಿ ಇಂಜಿನೀಯರಿಂಗ್ ಕಾಲೇಜು, ಹುಬ್ಬಳಿ. | 7495192 | 2233908 | 5261284 |
| 2 | ಇ203 | ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯ | 11153518 | 3972327 | 7181191 |
| 3 | ಇ204 | ಮಲೆನಾಡು ಇಂಜಿನಿಯರಿಂಗ್ ಕಾಲೇಜು, ಹಾಸನ | 9831344 | 3427231 | 6404113 |
| 4 | ಇ205 | ಪಿಡಿಎ ಇಂಜಿನೀಯರಿಂಗ್ ಕಾಲೇಜು, ಕಲಬುರ್ಗಿ | 11696422 | 4469845 | 7226577 |
| 5 | ಇ206 | ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್,ಮೈಸೂರು. | 43227108 | 32718861 | 10508247 |
| | | ಒಟ್ಟು ಮೊತ್ತ ರೂ. | **83403584** | **46822172** | **36581412** |

**ಟಿಪ್ಪಣಿ : ಕ್ರ.ಸಂ. 5 ರಲ್ಲಿನ ಸಂಸ್ಥೆಯ ಪ್ರಿನ್ಸಿಪಾಲರ ಖಾತೆಗೆ ಜುಲೈ'18 ಮತ್ತು ಆಗಸ್ಟ್'18 ರ ಮಾಹೆಗಳ ಸರ್ಕಾರದ ಪಾಲಿನ 85% ಸಹಾಯನುದಾನ ಒಳಗೊಂಡಿರುತ್ತದೆ.**

ಷರತ್ತು ಮತ್ತು ನಿಬಂಧನೆಗಳು:-

1)ಇಂಜಿನೀಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಸಹಾಯನುದಾನವನ್ನು ಪ್ರಿನ್ಸಿಪಾಲರುಗಳು ಸಲ್ಲಿಸಿರುವ ಬಿಲ್ಲಿನ ಆಧಾರದ ಹಾಗೂ ವಾಸ್ತವಿಕ ಸಹಾಯನುದಾನದ ಸರ್ಕಾರದ ಪಾಲಿನ ಶೇ.85ರಷ್ಟು ವೇತನವನ್ನು ಪರಿಗಣಿಸಲಾಗಿದೆ. ಈ ಸಹಾಯನುದಾನ ಬಿಡುಗಡೆಯು ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

2)ಆಡಳಿತ ಮಂಡಳಿಯ ಪಾಲಿನ ಶೇ.15 ರ ಮೊತ್ತವನ್ನು ಸಿಬ್ಬಂದಿಗಳ ಖಾತೆಗಳಿಗೆ ಪಾವತಿಸತಕ್ಕದ್ದು.

3)ಯಾವೊಬ್ಬ ನೌಕರನಿಗೆ ಹೆಚ್ಚಿನ ಅನುದಾನ ಪಾವತಿಯಾಗಿದ್ದು ಕಂಡು ಬಂದಲ್ಲಿ, ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.

4)2017-18 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.

5)ಈಗ ಬಿಡುಗಡೆ ಮಾಡಿರುವ ಅನುದಾನ ಮೊತ್ತದ ಖರ್ಚನ್ನು 2018-19 ನೇ ಸಾಲಿನ ಕೆಳಕಂಡ ಲೆಕ್ಕ ಶೀರ್ಷಿಕೆಯಲ್ಲಿ ಭರಿಸತಕ್ಕದ್ದು. 2203-ತಾಂತ್ರಿಕ ಶಿಕ್ಷಣ-00-104-ಸರ್ಕಾರೇತರ ತಾಂತ್ರಿಕ ಕಾಲೇಜುಗಳು, ಹಾಗೂ ಸಂಸ್ಥೆಗಳಿಗೆ ಸಹಾಯಾನುದಾನ-0-01-ಸರ್ಕಾರೇತರ ತಾಂತ್ರಿಕ ಶಾಲೆಗಳು-101-ಸಹಾಯಾನುದಾನ(2203-00-104-0-01-101).

ನಿರ್ದೇಶಕರು.

ಇವರಿಗೆ ಸೂಕ್ತ ಕ್ರಮಕ್ಕಾಗಿ:

1) ಮೇಲ್ಕಂಡ ಅನುಬಂಧದಲ್ಲಿಯ ಪ್ರಾಚಾರ್ಯರುಗಳಿಗೆ.
2) ನಿರ್ದೇಶನಾಲಯದ ಬಿಎಲ್‌ಎಸ್[3]
3) ನಿರ್ದೇಶನಾಲಯದ ನಗದು ಶಾಖೆ.

ಪ್ರತಿ ಮಾಹಿತಿಗಾಗಿ:

1] ಮಹಾಲೇಖಪಾಲರು(ಎ&ಇ), ಕರ್ನಾಟಕ, ಬೆಂಗಳೂರು.
2] ಸ್ಪೆಷಲ್ ಸೆಲ್, ಮಹಾಲೇಖಪಾಲರವರ ಕಛೇರಿ, ಬೆಂಗಳೂರು.
3] ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು. ಇವರ ಮಾಹಿತಿಗಾಗಿ
4] ಲೆಕ್ಕಾಧಿಕಾರಿಗಳು [ಬಿಲ್ಸ್].
5] ನಿರ್ದೇಶನಾಲಯದ ಐಎನ್‌ಎಸ್ (1), (2), (4) ಮತ್ತು ಆರ್‌ಇಸಿ(2) ಉಪಶಾಖೆಗಳಿಗೆ.
6] ಹೆಚ್ಚುವರಿ ಪ್ರತಿ
7] ಕಛೇರಿ ಪ್ರತಿ